ಸೆಪ್ಟಂಬರ್ 19	.. .. ..	ಅನಂತಚತುರ್ದಶಿ
ಅಕ್ಟೋಬರ್ 5	.. .. ..	ಮಹಾಲಯ ಅಮಾವಾಸ್ಯೆ
ಸದರೀ 6	.. .. ..	ನವರಾತ್ರೀ ಆರಂಭ ದಿವಸ
ಸದರೀ 11ರಿಂದ 20ರ ವರಿಗೆ ಉಭಯ ದಿವಸಗಳೂ ಸೇರಿ	..	ದಸರಾ ರಜಾ
ನವಂಬರ್ 3	.. .. ..	ದೀಪಾವಳಿ
ಸದರೀ 9	.. .. ..	ಪ್ರಿನ್ಸ್‌ಆಫ್‌ವೇಲ್ಸ್‌ರವರ ಜನ್ಮದಿವಸ
ಡಿಶಂಬರ್ 24ರಿಂದ 31ರ ವರಿಗೆ ಉಭಯ ದಿವಸಗಳೂ ಸೇರಿ		ಕ್ರಿಸ್‌ಮಸ್ ರಜಾ

ಈ ವರ್ಷದಲ್ಲಿ ಬರುವ ಸಮಸ್ತ ಭಾನುವಾರಗಳೂ—

ವಿಶೇಷ ವಿಷಯ—ಶ್ರೀಮ್ಮ ಮಹಾರಾಜರವರ ರಾಜ್ಯಾಭಿಷೇಕದ ದಿವಸ, ವಿನಾಯಕ ಚತುರ್ಥೀ ಮತ್ತು ಬಲಿಪಾಡ್ಯಮಿ ಹಬ್ಬಗಳು ಇವು ಭಾನುವಾರದ ದಿವಸ ಬರುವ ಕಾರಣ, ಇಲ್ಲಿ ಸೇರಿಸಿಲ್ಲ.

ಯುಗಾದೀ ಹಬ್ಬ, ಶ್ರೀರಾಮ ನವಮಿ, ಅರ್ಧಕ್ಷಡೆ, ಇವುಗಳು ಪ್ರತಿ ವರ್ಷವೂ ಬರುವ ವಿರಾವುದ ರಜಾದಲ್ಲಿ ಸಂಭವಿಸುವ ಕಾರಣ ಇಲ್ಲಿ ಸೇರಿಸಿಲ್ಲ.

ಅಪ್ಪಣೇ ಪ್ರಕಾರ,

ಎಸ್. ಅನಂತಸ್ವಾಮಿರಾವ್,
ರಿಜಿಸ್ಟ್ರಾರ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್ ಜಡ್ಜ್‌ರಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 1122.

ಮೃತಪಟ್ಟ ಹನುಮಂತಕಟ್ಟಿಯ ಆಸ್ತೀ ವಿಷಯದಲ್ಲಿ—

ಅರ್ಜೀದಾರ ವಸಂತರಾಯಕಟ್ಟಿ ಮೃತಪಟ್ಟ ಸದರೀ ಹನುಮಂತಕಟ್ಟಿಗೆ ತಮ್ಮನಾಗಬೇಕೆಂಬ ಹಕ್ಕುದಾರೀ ಮೇಲೆ ಚಿಕ್ಕಬಳಾಪುರದ ಸ್ಥಳದ ವಸಂತರಾಯಕಟ್ಟಿಯು ಚಿಕ್ಕಬಳ್ಳಾಪುರದ ವಾಸಸ್ಥನಾಗಿ ಮೃತಪಟ್ಟ ಹನುಮಂತಕಟ್ಟಿಯ ಜಿಂದಗೀ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ವಸಂತರಾಯಕಟ್ಟಿಯ ಅರ್ಜೀಯನ್ನು 1888ನೇ ಇಸವಿ ಜನವರೀ ತಿಂಗಳು ತಾರೀಖು 27ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಹನುಮಂತಕಟ್ಟಿಯ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಡಿಶಂಬರ್ ತಿಂಗಳು 12ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮ ದಸ್ತಖತ್ತಿನೊಡನೇ ಕೊಡೋಣಾಗಿದೆ.

1887ನೇ ಇಸವಿ ಅರ್ಜೀ ನಂಬರ್ 1123.

ಮೃತಪಟ್ಟ ವಿಟೋಬಾನ ಆಸ್ತೀ ವಿಷಯದಲ್ಲಿ—

ಅರ್ಜೀದಾರಳಾದ ಪಾರ್ವತಾಬಾಯಿ, ಮೃತಪಟ್ಟ ಸದರೀ ವಿಟೋಬಾನಿಗೆ ಹೆಂಡತೀ ಆಗಬೇಕೆಂಬ ಹಕ್ಕುದಾರೀ ಮೇಲೆ ಬೆಂಗಳೂರು ದರ್ಜೀಪ್ಯಾಟೇ ಸ್ಥಳದ ಪಾರ್ವತಾಬಾಯಿಯು ದರ್ಜೀಪ್ಯಾಟೇ ವಾಸಸ್ಥನಾಗಿ ಮೃತಪಟ್ಟ ವಿಟೋಬಾನಜಿಂದಗೀ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಪಾರ್ವತಾಬಾಯಿಯ ಅರ್ಜೀಯನ್ನು 1888ನೇ ಇಸವಿ ಜನವರೀ ತಿಂಗಳು ತಾರೀಖು 27ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವಿಟೋಬಾನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಅರ್ಜೀ ನಂಬರ್ 1085.

ಮೃತಪಟ್ಟ ತ್ಯಾಮಗೊಂಡ್ಲದ ದಾಸಶೆಟ್ಟಿಯ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಜಯರಾಮಶೆಟ್ಟಿ ಮೃತಪಟ್ಟ ಸದರೀ ದಾಸಶೆಟ್ಟಿಗೆ ಮಗನಾಗಬೇಕೆಂಬ ಹಕ್ಕುದಾರೀ ಮೇಲೆ ನೆಲವಂಗಲದ ತಾಲ್ಲೂಕು ತ್ಯಾಮಗೊಂಡ್ಲ ಸ್ಥಳದ ಚಿಟ್ಟೂರು ದಾಸಶೆಟ್ಟಿಯು ತ್ಯಾಮಗೊಂಡ್ಲದ ವಾಸಸ್ಥನಾಗಿ ಮೃತಪಟ್ಟ ದಾಸಶೆಟ್ಟಿಯ ಜಿಂದಗೀ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ಯು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಜಯರಾಮಶೆಟ್ಟಿಯ ಅರ್ಜೀಯನ್ನು 1888ನೇ ಇಸವಿ ಜನವರೀ ತಿಂಗಳು ತಾರೀಖು 12ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದಾಸಶೆಟ್ಟಿಯ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಯಿದರಿಂದ ತಿಳಿಯಪಡಿಸಿ ಯಿದೆ.

1887ನೇ ಇಸವಿ ಡಿಶಂಬರ್ ತಿಂಗಳು 9ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮ ದಸ್ತಖತ್ತೊಡನೇ ಕೊಡೋಣಾಗಿದೆ.

ಸಿ. ಕೈಸ್,
ಸಬ್ ಜಡ್ಜ್.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ರ್ಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 576.

ಮೃತಪಟ್ಟ ಜಗನ್ನಾಥನಾಯಿಡೂ ಯವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ವರದರಾಜುಲು ನಾಯಿಡುಯವರು ಮೃತಪಟ್ಟ ಸದರೀ ಜಗನ್ನಾಥನಾಯಿಡೂ ಯವರಿಗೆ ಯರಡನೇ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ದೇವರಾಜಮೊಹಲ್ಲಾ ಸ್ಥಳದ ಸದರೀ ವರದರಾಜುಲುನಾಯಿಡೂ ಯವರು ಸದರೀ ವಾಸಸ್ಥನಾಗಿ ಮೃತಪಟ್ಟ ಜಗನ್ನಾಥನಾಯಿಡೂ ಯವರ ಜಿಂದಗೀ ಬಗ್ಯಾಗಿ ಬರತಕ್ಕ 3200 ರೂಪಾಯಿ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ಯು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ವರದರಾಜುಲು ನಾಯಿಡೂಯವರ ಅರ್ಜೀಯನ್ನು 1888ನೇ ಇಸವಿ ಜನವರೀ ತಿಂಗಳು ತಾರೀಖು 30ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಜಗನ್ನಾಥನಾಯಿಡೂ ಯವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟ್ಯರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಡಿಶಂಬರ್ ತಿಂಗಳು 6ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸೀ ನಮ್ಮ ದಸ್ತಖತ್ತೊಡನೇ ಕೊಡೋಣಾಗಿದೆ.

1887ನೇ ಇಸವಿ ಅರ್ಜೀ ನಂಬರ್ 577.

ಮೃತಪಟ್ಟ ಮಹಂತದೇವವಡೇರ ಆಸ್ತೀ ವಿಷಯದಲ್ಲಿ—

ಅರ್ಜೀದಾರ 1ನೇ ಈರಯ್ಯ 2ನೇ ಶಂಕರಯ್ಯ 3ನೇ ಮಹಂತದೇವರು ಮೈನರ್ ಗಾರ್ಡಿಯರ್ ಮತ್ತು ತಾಯಿ ಮಲ್ಲಮ್ಮ ಸಹ ಮೃತಪಟ್ಟ ಸದರೀ ಮಹಂತದೇವವಡೇರಿಗೆ ಮಕ್ಕಳು, ಹೆಂಡತೀ ಆಗಬೇಕೆಂಬ ಹಕ್ಕುದಾರೀ ಮೇಲೆ ತಿರುಮಕೂಡ್ಲು ನರಸೀಪುರದ ತಾಲ್ಲೂಕು ಬುವಹಳ್ಳಿಗೆ ಶೇರಿದ ವೀರಪ್ಪವಡೇರ ಹುಂಡಿ ಸ್ಥಳದ ಮೇಲ್ಕಂಡ 1—2—3ನೇ ಅರ್ಜೀದಾರು ಸದರೀ ವಾಸಸ್ಥನಾಗಿ ಮೃತಪಟ್ಟ